■ ವಿಶಾಖ ಎನ್.





# ಗರ್ಭವತಿ ದೀಪಿಕಾ ಮುಂದಿನ ದಿನಗಳು...

ದೀಪಿಕಾ ಪಡುಕೋಣೆ ಎರಡನೇ ಮಗುವಿಗೆ ತಾಯಿ ಆಗಲಿರುವ ಸುದ್ದಿಯನ್ನು ಅವರು ಹಾಗೂ ರಣವೀರ್ ಸಿಂಗ್ ಘೋಷಿಸಿದ್ದೇ ತಡ ಮತ್ತೆ ಒಂದಿಷ್ಟು ವದಂತಿಗಳು ಹರಿದಾಡತೊಡಗಿದವು.

ಅಲ್ಲು ಅರ್ಜುನ್ ಅಭಿನಯದ 'ರಾಕಾ' ತೆಲುಗು ಸಿನಿಮಾದಲ್ಲಿ ದೀಪಿಕಾ ಪ್ರಮುಖ ಪಾತ್ರ ನಿರ್ವಹಿಸಲಿದ್ದಾರೆ. ಸಾಹಸ ಪ್ರಧಾನ ಸಿನಿಮಾ ಅದಾಗಿರುವುದರಿಂದ ದೀಪಿಕಾ ಕೂಡ ಕೆಲವು ಹೊಡೆದಾಟದ ದೃಶ್ಯಗಳಲ್ಲಿಯೂ ನಟಿಸಲಿದ್ದಾರೆ ಎಂಬೆಲ್ಲ ಮಾತುಗಳಿವೆ. ಚಿತ್ರದಲ್ಲಿ ಅವರ ಪಾತ್ರ ಏನು ಎನ್ನುವುದನ್ನು ಮಾತ್ರ ನಿರ್ದೇಶಕ ಅಟ್ಲಿ ಇನ್ನೂ ಗುಟ್ಟಾಗಿಯೇ ಇಟ್ಟಿದ್ದಾರೆ. ಗರ್ಭಿಣಿ ಆಗಿರುವುದರಿಂದ ದೀಪಿಕಾ ಪಾತ್ರಕ್ಕೆ ಕತ್ತರಿ ಹಾಕಲಾಗುತ್ತಿದೆ ಎಂದೆಲ್ಲ ಸುದ್ದಿ ಹರಿದಾಡಿತು. ಇದಕ್ಕೆ ಚಿತ್ರತಂಡ ಸ್ಪಷ್ಟನೆ ನೀಡಿದ್ದು, ಯಾವುದೇ ಸುಳ್ಳು ಸುದ್ದಿಗೆ ಕಿವಿಗೊಡಬೇಡಿ ಎಂದು ಕೇಳಿಕೊಂಡಿದೆ.

ದೀಪಿಕಾ ವೃತ್ತಿಪರ ಅಭಿನೇತ್ರಿ. ಅವರು ಒಂದು ಸಿನಿಮಾಗೆ ಸಹಿ ಹಾಕುವ ಮೊದಲು ತಮ್ಮ ಸ್ಥಿತಿಯನ್ನು ಅರಿತೇ ಇರುತ್ತಾರೆ. ಅವರು ಗರ್ಭಿಣಿ ಆಗಲಿರುವ ಸುದ್ದಿ ಈಗ ಅಧಿಕೃತವಾಗಿ ಹೊರಬಿದ್ದಿದೆಯಷ್ಟೆ. 'ರಾಕಾ' ಚಿತ್ರತಂಡಕ್ಕೆ ಅದು ಮೊದಲೇ ತಿಳಿದಿತ್ತು ಎಂದೂ ಕೆಲವರು ವರದಿ ಮಾಡಿದ್ದಾರೆ.

'ನಿರೀಕ್ಷಿತ ರೀತಿಯಲ್ಲಿಯೇ ಸಿನಿಮಾ ಚಿತ್ರೀಕರಣ ನಡೆಯಲಿದೆ. ಗರ್ಭಿಣಿಯಾಗಿದ್ದರೂ ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿಯೇ ದೀಪಿಕಾ ಅಭಿನಯಿಸಲು ಮುಂದಾಗಿರುವುದು. ಅವರ ಪಾತ್ರ ಹೇಗಿರಬೇಕು ಎಂದು ಮೊದಲು ಯೋಚಿಸಿದ್ದೇವೆಯೋ ಈಗಲೂ ಅದೇ ರೀತಿ ಇರಲಿದೆ' ಎಂದು ಚಿತ್ರತಂಡವು ಸ್ಪಷ್ಟನೆ ನೀಡಿದೆ.

ಸನ್ ಪಿಕ್ಚರ್ಸ್ ನಿರ್ಮಿಸುತ್ತಿರುವ 'ರಾಕಾ' ಮುಂದಿನ ವರ್ಷ ತೆರೆಕಾಣಲಿದೆ. ಅಲ್ಲು ಅರ್ಜುನ್ ಹಾಗೂ ಅಟ್ಲಿ ಕಾಂಬಿನೇಷನ್ ಇರುವುದರಿಂದ ಪ್ರೇಕ್ಷಕರಲ್ಲಿ ನಿರೀಕ್ಷೆ ಗರಿಗೆದರಿದೆ. ಅಟ್ಲಿ ನಿರ್ದೇಶನದ 'ಜವಾನ್' ಹಿಂದಿ ಚಿತ್ರದಲ್ಲಿಯೂ ದೀಪಿಕಾ ಅಭಿನಯಿಸಿದ್ದರು.

ಸಿದ್ಧಾರ್ಥ್ ಆನಂದ್ ನಿರ್ದೇಶನದ 'ಕಿಂಗ್' ಚಿತ್ರದಲ್ಲಿ ಶಾರುಕ್ ಖಾನ್ ಜೊತೆ ದೀಪಿಕಾ ತೆರೆಹಂಚಿಕೊಂಡಿದ್ದಾರೆ. ಆ ಸಿನಿಮಾದ ಚಿತ್ರೀಕರಣ ಕೂಡ ಇನ್ನೂ ಪೂರ್ಣಗೊಂಡಿಲ್ಲ. ಅದೂ ಸಾಹಸಪ್ರಧಾನ ಸಿನಿಮಾ ಆಗಿದ್ದು, ಒಪ್ಪಂದದಂತೆ ತಮ್ಮ ಭಾಗದ ಅಷ್ಟೂ ಚಿತ್ರೀಕರಣವನ್ನು ದೀಪಿಕಾ ಮುಗಿಸಿಕೊಡಲಿದ್ದಾರೆ. ರೆಡ್ ಚಿಲ್ಲೀಸ್ ನಿರ್ಮಾಣದಲ್ಲಿ ಅಂದಾಜು ₹350 ಕೋಟಿ ಬಜೆಟ್‌ನಲ್ಲಿ ಸಿನಿಮಾ ತಯಾರಾಗುತ್ತಿದೆ. ಶಾರುಕ್ ಪುತ್ರಿ ಸುಹಾನಾ ಖಾನ್, ರಾಣಿ ಮುಖರ್ಜಿ, ಅಭಿಷೇಕ್ ಬಚ್ಚನ್ ಹಾಗೂ ಅಭಯ್ ವರ್ಮ ತಾರಾಬಳಗದಲ್ಲಿದ್ದಾರೆ.

ದೀಪಿಕಾ ಇನ್ನೊಂದು ಮಗುವಿಗೆ ಜನ್ಮ ನೀಡುವ ಹೊತ್ತಿಗೆ 'ಕಿಂಗ್' ಚಿತ್ರವು ತೆರೆಕಾಣುವುದಂತೂ ಸ್ಪಷ್ಟ. 'ರಾಕಾ' ಚಿತ್ರವನ್ನು ತಮ್ಮ ಮಕ್ಕಳೊಟ್ಟಿಗೇ ಅವರು ನೋಡುವ ದಿನವೂ ಬಂದೀತು. ■

# ಕುತೂಹಲ ಮೂಡಿಸಿದ ಕಾರಾ




ಕುರ್ಚಿ ತುದಿಗೆ ತಂದು ನಿಲ್ಲಿಸುವಂತಹ ಥ್ರಿಲ್ಲರ್ ಚಿತ್ರಗಳು ಹೊಸ ಕಾಲದಲ್ಲಿ ಪುಂಖಾನುಪುಂಖವಾಗಿ ಬರುತ್ತಿವೆ. ತಮಿಳಿನ 'ಕಾರಾ' ಅಂಥದ್ದೇ ಪ್ರಭೇದದ ಚಿತ್ರ. ಇದೇ ತಿಂಗಳಾಂತ್ಯಕ್ಕೆ ತೆರೆಕಾಣುತ್ತಿರುವ ಈ ಸಿನಿಮಾದಲ್ಲಿ ಧನುಷ್ ಇನ್ನೊಂದು ಪ್ರಯೋಗಕ್ಕೆ ಒಡ್ಡಿಕೊಂಡಿದ್ದಾರೆ.

'ಪೊರ್ ತೊಳಿಲ್' ತಮಿಳು ಸಿನಿಮಾ ಮೂಲಕ ಭರವಸೆ ಮೂಡಿಸಿದ್ದ ನಿರ್ದೇಶಕ ವಿಘ್ನೇಶ್ ರಾಜಾ ಅವರು ಆ್ಯಕ್ಷನ್–ಕಟ್ ಹೇಳಿರುವ 'ಕಾರಾ'ದ ಟ್ರೈಲರ್ ಕುತೂಹಲ ಮೂಡಿಸುವಂತಿದೆ.

ಒಂದಾದ ಮೇಲೆ ಒಂದರಂತೆ ಬ್ಯಾಂಕ್‌ಗಳ ದರೋಡೆ ಮಾಡಿದ್ದ ವ್ಯಕ್ತಿಯೊಬ್ಬನ ನಿಜ ಬದುಕಿನ ಕಥೆಯಿಂದ ಸ್ಫೂರ್ತಿ ಪಡೆದು ನಿರ್ದೇಶಕರು ಚಿತ್ರಕತೆ ಹೆಣೆದಿದ್ದಾರೆ. 1991ರಲ್ಲಿ ರಾಮನಾಥಪುರಂನಲ್ಲಿ ಕೊಲ್ಲಿ ಯುದ್ಧ ಆಗಿದ್ದ ಸಂದರ್ಭದಲ್ಲಿ ನಡೆದಿದ್ದ ಸರಣಿ ದರೋಡೆ ಪ್ರಕರಣಗಳ ಕಥಾಹಂದರ ಈ ಚಿತ್ರದ ಜೀವಾಳ. ದರೋಡೆ ಪ್ರಕರಣಗಳು ಸಹಜವಾಗಿಯೇ ಮೂಡಿಸುವ ಕುತೂಹಲದ ಜೊತೆಗೆ ಕಳ್ಳ–ಪೊಲೀಸ್ ಆಟವನ್ನೂ ಚಿತ್ರದಲ್ಲಿ ಇಡಲಾಗಿದೆ. ಮಮಿತಾ ಬೈಜು ನಾಯಕಿಯ ಪಾತ್ರದಲ್ಲಿದ್ದು, ಕೆ.ಎಸ್. ರವಿಕುಮಾರ್, ಜಯರಾಂ ಹಾಗೂ ಸೂರಜ್ ವೆಂಜರಮೂಡು ತಾರಾಗಣದಲ್ಲಿದ್ದಾರೆ. ಜಿ.ವಿ. ಪ್ರಕಾಶ್ ಕುಮಾರ್ ಸ್ವರ ಸಂಯೋಜನೆ ಮಾಡಿದ್ದು, ಜಾಗತಿಕ ಸಂಘರ್ಷವೊಂದು ಸ್ಥಳೀಯ ಬದುಕಿನ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎನ್ನುವುದನ್ನು ಚಿತ್ರ ಕಾಣಿಸಲಿದೆ.

ಪಶ್ಚಿಮ ಏಷ್ಯಾ ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ಚಿತ್ರಕ್ಕೆ ಒಂದು ಸಮಕಾಲೀನತೆಯೂ ಪ್ರಾಪ್ತವಾದಂತಾಗಿದೆ. ■